# ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ, ಜಿಲ್ಲಾಧಿಕಾರಿಗಳ ಕಛೇರಿ, ಬೀದರ

**ಸಂ.ಬೀ.ಜಿ.ಕಾ.ಸೇ.ವಿ.ಸ.ಸಂ./ಸಿ.ಆರ್-04/2025-26** **ದಿನಾಂಕ: 20/01/2026**

**ಇವರಿಗೆ,**
**ಮಾನ್ಯ ಸಹಾಯಕ ನಿರ್ದೇಶಕರು,**
**ವಾರ್ತಾ ಮತ್ತು ಪ್ರಚಾರ ಇಲಾಖೆ,**
**ಬೀದರ.**

**: ಉಚಿತ ಪತ್ರಿಕಾ ಪ್ರಕಟಣೆಗಾಗಿ:**

ವಿಷಯ ಚಾಲಕ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ.

ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋಶ ಸಹಕಾರ ಸಂಘ ನಿಯಮಿತ, ಜಿಲ್ಲಾಧಿಕಾರಿಗಳ ಕಛೇರಿ, ಬೀದರ ರವರ ಮೂಲಕ ಹೊರಗುತ್ತಿಗೆ ಮೇಲೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬೀದರ ವಿಭಾಗದ ವ್ಯಾಪ್ತಿಯ ಬೀದರ-1, ಬೀದರ-2 ಭಾಲ್ಕಿ, ಔರಾದ ಬಸವಕಲ್ಯಾಣ ಮತ್ತು ಹುಮನಾಬಾದ ಘಟಕಗಳ ಬಸ್ ಚಾಲನೆಗೆ 78 ಜನ ಚಾಲಕರು ಬೇಕಾಗಿರುವುದರಿಂದ **Walk in interview** ಅನ್ನು ಏರ್ಪಡಿಸಲಾಗಿದೆ.

ಕಾರಣ ದಿನಾಂಕ:03.02.2026 ರಿಂದ 04.02.2026ರ ವರೆಗೆ ಚಾಲಕ ಹುದ್ದೆಗೆ ಕಕರಸಾ ನಿಗಮದ ಹಳೆ ಬಸ್ ನಿಲ್ದಾಣದ ಬೀದರ ವಿಭಾಗೀಯ ಕಛೇರಿಯ ಕಛೇರಿ ಸಮಯದಲ್ಲಿ ನೇರ ಸಂದರ್ಶನ ನಡೆಸಲಾಗುತ್ತಿದೆ. ಆಯ್ಕೆ ಸಮೀತಿ ಸಮ್ಮುಖದಲ್ಲಿ ಸಂದರ್ಶನಕ್ಕೆ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು, ಅಭ್ಯರ್ಥಿಗಳು ಹಾಜರು ಪಡಿಸಬೇಕಾದ ದಾಖಲಾತಿಗಳು ಮತ್ತು ಅನುಸರಿಸಬೇಕಾದ ಷರತ್ತು ನಿಬಂಧನೆಗಳ ಹಾಗೂ ಹೆಚ್ಚಿನ ವಿವರಗಳಿಗಾಗಿ ಸರಕಾರದ ವೆಬ್ ಸೈಟ್ www.bidar.nic.in ನ್ನು ಸಂಪರ್ಕಿಸಬಹುದಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

Malegaon

ಕಾರ್ಯದರ್ಶಿಗಳು,
ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋಶ
ಸಹಕಾರ ಸಂಘ ನಿಯಮಿತ
ಜಿಲ್ಲಾಧಿಕಾರಿಗಳ ಕಛೇರಿ, ಬೀದರ

**ಕಛೇರಿ ಟಿಪ್ಪಣಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದಿಸಲ್ಪಟ್ಟಿದೆ**

**SECRETARY**
**Bidar District Services of Labour**
**Multipurpose Co-operative Society**
**DC Office BIDAR**

20/01/2026

**A. ಹಾಜರು ಪಡಿಸಬೇಕಾದ ಮೂಲ ದಾಖಲಾತಿಗಳು:**

**I ಚಾಲಕ ಹುದ್ದೆಗೆ:**

1) ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ
2) Must be in position of two years HTV licence to drive heavy passenger/goods vehicle and possess Karnataka Badge.
3) ಕಕರಸಾ ನಿಗಮದಲ್ಲಿ ಅಥವಾ ಸಹೋದರ ಸಂಸ್ಥೆಗಳಾದ ಕರಾರಸಾ ನಿಗಮ/ ಬೆಮಸಾ ಸಂಸ್ಥೆ/ ವಾಕರಸಾ ಸಂಸ್ಥೆಗಳಲ್ಲಿ ಗಣಕೀಕೃತ ಚಾಲನಾ ಪಥದ ಟ್ರ್ಯಾಕ್ ಟೆಸ್ಟನಲ್ಲಿ ಭಾಗವಹಿಸಿ, ಉತ್ತೀರ್ಣರಾದ ಕುರಿತು ಅಂಕಪಟ್ಟಿ ಹಾಗೂ ದಾಖಲಾತಿ ಪರಿಶೀಲನಾ ವರದಿ.
4) ಆಧಾರ ಕಾರ್ಡ
5) ಜಾತಿ ಪ್ರಮಾಣ ಪತ್ರ
6) ಇತ್ತೀಚಿನ ಪಾಸಪೋರ್ಟ ಅಳತೆಯ 4 ಭಾವಚಿತ್ರಗಳು.
7) ಅಭ್ಯರ್ಥಿಯ ವಯಸ್ಸು **ದಿನಾಂಕ:04.02.2026** ಕನಿಷ್ಠ 24 ವರ್ಷ ತುಂಬಿರಬೇಕು ಮತ್ತು ಈ ಕೆಳಗಿನಂತೆ ಗರಿಷ್ಠ ವಯೋಮಿತಿ ಮೀರಿರಬಾರದು.

ಸಾಮಾನ್ಯ ವರ್ಗ. 35 ವರ್ಷ, ಪ್ರವರ್ಗ 2A, 2B, 3A & 3B: 38 ವರ್ಷ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1: 40 ವರ್ಷ.

- ಪ್ರವರ್ಗವಾರು ಭರ್ತಿ ಮಾಡಿಕೊಳ್ಳುವ ವಿವರ ಈ ಕೆಳಕಂಡಂತಿದೆ.

**ಚಾಲಕ ಹುದ್ದೆ: 56**

| ಪ್ರವರ್ಗ | ಇತರೆ | ಮ.ಅ | ಒಟ್ಟು |
|---|---|---|---|
| ಪ.ಜಾ | 5 | 4 | 9 |
| ಪ.ಪಂ | 3 | 1 | 4 |
| ಪ್ರ-1 | 1 | 2 | 3 |
| 2(ಎ) | 5 | 3 | 8 |
| 2(ಬಿ) | 0 | 2 | 2 |
| 3(ಎ) | 0 | 2 | 2 |
| 3 (ಬಿ) | 2 | 1 | 3 |
| ಸಾ.ಅ | 16 | 9 | 25 |
| ಒಟ್ಟು | 32 | 24 | 56 |

**ಚಾಲಕ ಹಿಂಬಾಕಿ (Backlog)ಹುದ್ದೆ:22**

| ಪ್ರವರ್ಗ | ಇತರೆ | ಒಟ್ಟು |
|---|---|---|
| ಪ.ಜಾ | 0 | 0 |
| ಪ.ಪಂ | 0 | 0 |
| ಪ್ರ-1 | 3 | 3 |
| 2(ಎ) | 15 | 15 |
| 2(ಬಿ) | 0 | 0 |
| 3(ಎ) | 4 | 4 |
| 3 (ಬಿ) | 0 | 0 |
| ಸಾ.ಅ | 0 | 0 |
| ಒಟ್ಟು | 22 | 22 |

**II. ಇತರೇ ಷರತ್ತುಗಳು:**

1) ಬೀದರ ವಿಭಾಗದ ಬೀದರ-1, ಬೀದರ-2, ಭಾಲ್ಕಿ, ಬಸವಕಲ್ಯಾಣ. ಔರಾದ ಮತ್ತು ಹುಮನಾಬಾದ ಘಟಕಗಳ ಪೈಕಿ ಯಾವುದೇ ಘಟಕದಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧರಿರಬೇಕು.
2) ಚಾಲಕ ಹುದ್ದೆಗೆ ಮಾಸಿಕ ವೇತನವು ಚಾಲ್ತಿ ಸಾಲಿನಲ್ಲಿರುವ ಕನಿಷ್ಠ ವೇತನ ಪ್ರಕಾರ ಪಾವತಿಸಲಾಗುವುದು. ಕರ್ತವ್ಯಕ್ಕೆ ಗೈರು ಹಾಜರಾದಲ್ಲಿ ತತ್ಸಮಾನವಾಗಿ ವೇತನವನ್ನು ಕಡಿಕಗೊಳಿಸಲಾಗವುದು.
3) ಚಾಲಕ ಹುದ್ದೆಗಾಗಿ ಗಣಕೀಕೃತ ಚಾಲನಾ ಪಥದ ಟ್ರೇಡ್ ಟೆಸ್ಟನಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಪರಿಗಣಿಸಲಾಗುವದು.
4) ಸದರಿ ಹೊರಗುತ್ತಿಗೆಯ ನಿಯೋಜನೆಯು ಗರಿಷ್ಠ (11) ಹನ್ನೊಂದು ತಿಂಗಳ ಅವಧಿಗೆ ಮಾತ್ರ ಇರುತ್ತದೆ.
5) ನಿಗಮದ ಅವಶ್ಯತೆಗನುಗುಣವಾಗಿ ಯಾವದೇ ಸಮಯದಲ್ಲಿ ಸದರಿ ಹೊರಗುತ್ತಿಗೆ ಆದೇಶ ರದ್ದುಪಡಿಸಬಹುದಾಗಿರುತ್ತದೆ.
5) ಯಾವುದೇ ವಿಷಯದ ಕುರಿತು ಗೊಂದಲ ಉಂಟಾದಲ್ಲಿ ನಿಗಮದ ನಿರ್ಣಯವೇ ಅಂತಿಮವಾಗಿರುತ್ತದೆ.
6) ಸಂದರ್ಶನಕ್ಕೆ ಗೊತ್ತು ಪಡಿಸಿದ ದಿನಾಂಕಗಳಂದು ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಮುಂಜಾನೆ 12.00 ಗಂಟೆಯ ಒಳಗಾಗಿ ಕಕರಸಾ ನಿಗಮದ ವಿಭಾಗೀಯ ಕಛೇರಿ ಬೀದರನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು. ನಂತರದಲ್ಲಿ ಹಾಜರಾಗುವ ಅಭ್ಯರ್ಥಿಗಳ ಹೆಸರುಗಳನ್ನು ನೋಂದಾಯಿಸಿಕೊಳ್ಳಲಾಗುವುದಿಲ್ಲ. ಮುಂಚಿತವಾಗಿ ಹೆಸರುಗಳನ್ನು ನೋಂದಾಯಿಸಿಕೊಂಡವರಿಗೆ ಮಾತ್ರ ಸಂದರ್ಶನಕ್ಕೆ ಹಾಜರಾಗಲು ಅವಕಾಶವಿರುತ್ತದೆ.
7) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ಮೂಲ ದಾಖಲಾತಿಗಳೊಂದಿಗೆ ಎರಡು (2) ಸೆಟ್ ಛಾಯಾ ಪ್ರತಿಗಳನ್ನು ಒದಗಿಸುವುದು. ಹಾಗು ಇತ್ತೀಚಿನ 02 ಪಾಸಪೋರ್ಟ ಅಳತೆಯ ಫೋಟೋಗಳನ್ನು ಸಲ್ಲಿಸುವದು.
8) ಈ ನೇಮಕಾತಿಯ ತಾತ್ಕಾಲಿಕವಾಗಿದ್ದು ಮೆರಿಟ್ ಆಧಾರದ ಮೇಲೆ ಪಾರದರ್ಶಕವಾಗಿ ಪ್ರಚಲಿತ ನಿಯಮಾವಳಿಯಂತೆ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗುವುದು. ಕಾರಣ ಯಾವುದೇ ಆಮೀಷಕ್ಕೆ ಒಳಗಾಗಬಾರದೆಂದು ತಿಳಿಸಲಾಗಿದೆ.
9. ಮುಂಬರುವ ದಿನಗಳಲ್ಲಿ ಸಿಬ್ಬಂದಿಗಳ ಅವಶ್ಯಕತೆ ಇದ್ದಲ್ಲಿ ಈ ಸಂದರ್ಶನದಲ್ಲಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು,
10 ಈ ಆಯ್ಕೆಯು ಯಾವುದೇ ಖಾಯಂ ಹುದ್ದೆಗಾಗಿ ಎಂದು ಭಾವಿಸತಕ್ಕದಲ್ಲ.

Malegaon

ಕಾರ್ಯದರ್ಶಿಗಳು,
ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ಧೋಶ
ಸಹಕಾರ ಸಂಘ ನಿಯಮಿತ
ಜಿಲ್ಲಾಧಿಕಾರಿಗಳ ಕಛೇರಿ, ಬೀದರ

SECRETARY
Bidar District Services of Labour
Multipurpose Co-operative Society
D.C. Office BIDAR